# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ದೂರವಾಣಿ; 0816-225596, 0816-2255597, 0816-2255597 ಫ್ಯಾಕ್ಸ್ ; 0816-2270719


ಸಂಖ್ಯೆ:ತುವಿ:ಶೈವಿ:UG:2021-22: 2223 ದಿನಾಂಕ:18.10.2021

## ಸುತ್ತೋಲೆ

ವಿಷಯ : 2021-22ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಕುರಿತು

ಉಲ್ಲೇಖ : 1) ಸ್ನಾತಕ ಪ್ರವೇಶಾತಿ ಅಧಿಸೂಚನೆ 2021-22 ದಿನಾಂಕ:24.08.2021

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.10.2021
(ಕಂಡಿಕೆ: 56 ಪುಟ ಸಂಖ್ಯೆ: 13)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ವಿವಿಧ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆಯಲು ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳಿಗೆ ಉಲ್ಲೇಖ(1)ರಲ್ಲಿ ಅಧಿಸೂಚಿಸಲಾಗಿರುತ್ತದೆ.

ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಸಂಬಂಧವಾಗಿ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಬಿ.ಎ ಬಿ.ಎಸ್ಸಿ ಕಾಂಬಿನೇಷನ್‌ವಾರು ಪ್ರವೇಶ ಪಟ್ಟಿಯನ್ನು ಸಲ್ಲಿಸಲಾಗುತ್ತಿತ್ತು. ಆದರೆ, 2021-22ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿಗಳು ರಾಷ್ಟ್ರೀಯ ಶಿಕ್ಷಣ ನೀತಿ ವಿನಿಯಮದನ್ವಯ ಪ್ರವೇಶ ಪಡೆದಿರುವುದರಿಂದ, ಸದರಿ ವಿನಿಯಮದಲ್ಲಿ ಬಿ.ಎ ಮತ್ತು ಬಿ.ಎಸ್ಸಿ ಪದವಿ ಕೋರ್ಸುಗಳಿಗೆ ಕಾಂಬಿನೇಷನ್‌ವಾರು ಪ್ರವೇಶವಿಲ್ಲದೆ ವಿದ್ಯಾರ್ಥಿಯ ಆಯ್ಕೆಯನುಸಾರ ಕೋರ್ಸುವಾರು ಪ್ರವೇಶವಿರುತ್ತದೆ.

ಈ ಕಾರಣದಿಂದಾಗಿ, ಕಾಂಬಿನೇಷನ್‌ವಾರು ಪ್ರವೇಶಪಟ್ಟಿಯನ್ನು ಸಲ್ಲಿಸದೆ 2021-22ನೇ ಸಾಲಿಗೆ ಬಿ.ಎ ಮತ್ತು ಬಿ.ಎಸ್ಸಿ ಪದವಿಗೆ ವಿವಿಧ ವಿಷಯವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಈ ಪತ್ರದೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಎಲ್ಲಾ ಪದವಿ ಕೋರ್ಸುಗಳನ್ನೊಳಗೊಂಡಂತೆ ಅನುಬಂಧಗಳನ್ವಯ ಹಾಗೂ 2 ಮತ್ತು 3ನೇ ವರ್ಷದ ಪದವಿಗಳಿಗೆ ಈ ಹಿಂದೆ ಸಲ್ಲಿಸುತ್ತಿದ್ದ ಮಾದರಿಯಲ್ಲಿಯೇ ಮಾಹಿತಿಯನ್ನು ದಿನಾಂಕ:30.10.2021ರೊಳಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಿದೆ.

ಆದೇಶದ ಮೇರೆಗೆ

18/10/21

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

ಅಡಕ: ಪ್ರವೇಶಾತಿ ಮಾಹಿತಿಗಳು

(ಸೂಚನೆ: ಪ್ರವೇಶಪಟ್ಟಿಯ ಭರ್ತಿ ಸಂಬಂಧ ಯಾವುದೇ ಗೊಂದಲಗಳಿದ್ದಲ್ಲಿ ನಿಗದಿತ ದಿನಾಂಕದೊಳಗೆ ಶೈಕ್ಷಣಿಕ ವಿಭಾಗವನ್ನು ಸಂಪರ್ಕಿಸುವುದು.)

ಗೆ,

ಪ್ರಾಂಶುಪಾಲರು, ಘಟಕ ಮತ್ತು ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.

ಪ್ರತಿಗಳು:

1) ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ಇ-ಮೇಲ್ ಮುಖಾಂತರ ಕಳುಹಿಸುವುದು.
2) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3) ಕಚೇರಿ ಪ್ರತಿ.